Regd No M 1299 SATYAVADI Founded 1917
The Oldest Newspaper of Mys

ಸತ್ಯವಾದಿ

ರಾಷ್ಟ್ರೀಯ ವಾರ್ತಾಪತ್ರಿಕೆ
(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 160] ಶುಕ್ರವಾರ 14—5—48 [ಬಿಡಿ ಪ್ರತಿ 3 ಪೈ

ವಿವಿಧ ವರ್ತಮಾನ

ಹಾಲೆಂಡಿನ ರಾಣಿ ವಿಲ್ಹೆಲ್ಮಿನಾರವರು ಸೆಪ್ಟಂಬರು ತಿಂಗಳಲ್ಲಿ ರಾಜ್ಯಪರಿತ್ಯಾಗ ಮಾಡುವರೆಂದೂ, ರಾಜಕುಮಾರಿ ಜುಲಿನಾರವರು ರಾಣಿ ಯಾಗುವರೆಂದೂ ಹೇಳಲಾತದೆ

ಬೆಂಗಳೂರಿನಲ್ಲಿ ದತ್ತೂರಿ ಮಿಶ್ರ ತಿಂಡಿ ಕೊಟ್ಟು ಹಣ ಅಪಹರಿಸಲು ಪ್ರಯತ್ನಿಸಿದ ಕೃಷ್ಣ ಎಂಬುವನಿಗೆ 2 ವರ್ಷ ಕಠಿಣ ಸಜಾ ವಿಧಿಸಲಾಯಿತು

ಮದರಾಸು— ಹೈದರಾಬಾದು ಸಂಸ್ಥಾನದಲ್ಲಿನ ಗೊಂಡಪಲ್ಲಿ ಎಂಬಲ್ಲಿ ಪೋಲೀಸರೊಡನೆ ರಜಾಕರರು ಅನೇಕ ಮನೆಗಳಿಗೆ ನುಗ್ಗಿ ಜನರನ್ನು ಹೊಡೆದು ಲೂಟಿ ಮಾಡಿ ಕೆಲವರನ್ನು ಬಂಧಿಸಿರುವುದಾಗಿ ವಾರ್ತೆ ಬಂದಿದೆ.

ನಿಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನದ 16 ನೇ ಅಧಿವೇಶನವು ಈ ತಿಂಗಳು ಕಡೇ ವಾರದಲ್ಲಿ ಬೆಳಗಾವಿಯಲ್ಲಿ ನಡೆಯುವುದೆಂದು ತಿಳಿಯಬಂದಿದೆ

[ಪಾಸಸದಲ್ಲಿ ಸೋವಮವಾರದಿಂದ ಜಾಡಮಾಲಿಗಳು ಮುಷ್ಕರ ಹಿಡಿದು ಊರೆಲ್ಲಾ ಗಲೀಜಾಗಿದೆಯೆಂದೂ, ಮುಂಗಳವಾರ ಮಾಂಸಭೆಯವರು ಸ್ಪೆಷಲ್ ಮಾಟ [illegible] ಜಾಡಮಾಲಿಗಳು ಕೂ[illegible] ಬಾರದಿದ್ದರೆ ಅವರನ್ನು [illegible]ರೆಯವರನ್ನು ನೇಮಿ[illegible] ನಿರ್ಧರಿಸಿದರೆಂದೂ

ವಂಡರ್ ಲ್ಯಾಂಡ್ಸ್

ಜನನಿಬಿಡ 2 ನೇ ವಾರ
ಮಾಡರ್ನ ಥಿಯೇಟರ್ಸ್‌ರವರ
೧೦೦೦ ತಲೈವಾಂಗಿ
ಅಪೂರ್ವ
ಚಿಂತಾಮಣಿ
ಸುಂದರ ತಮಿಳು ಚಿತ್ರ : ರಮ್ಯ ಕಥೆ
ಪಾತ್ರ — ಪಿ ಎಸ್. ಗೋವಿಂದ್
ಎಂ. ಆರ್. ಸ್ವಾಮಿನಾಥ್
ಕಾಳಿ ಎನ್. ರತ್ನಂ, ವಿ. ಎನ್. ಜಾನಕಿ
ರಾಜಾಕಾಂತು ಮುಂತಾದವರು
Released by Rajlakhmi Pictures
Gandhinagar, Bangalore City

Edited, Printed and Published by M S Krishna Rao at the Satyavadi Pre[illegible] Agrahar M[illegible]

ಕಾನ್ ಅಸೆಂಬ್ಲಿಯ ಆಣುಬಾಂಬುಗಳು

[ಕಂಠಿ ' ಕಡತದಿಂದ]

— ಕಾರ್ಕ ಅಸೆಂಬ್ಲಿ ಸದಸ್ಯರಿಗೆ ಡಬ್ಬಲ್ ಫಸ್ಟ್ ಕ್ಲಾಸ್ ಫೇರ್ ಕೊಡೋದು ಬಹಳ ದುಬಾರಿ. ಸಿಂಗಲ್ ಫಸ್ಟ್‌ಕ್ಲಾಸ್ ಸಾಕು.
— ಹುಚ್ಚೇಗೌಡ

— ಕಾರ್ಕ್‌ಸೆಂಬ್ಲಿ ಮೆಂಬರುಗಳು ಸತಿ ಸಮೇತರಾಗಿ ಕಾರ್ಕ್‌ಸೆಂಬ್ಲಿಗೆ ಬರಬೇಕು, ಡಬ್ಬಲ್ ಫಸ್ಟ್ ಕ್ಲಾಸ್ ಫೇರಿನ ಸಾರ್ಥಿಕ್ಯಕ್ಕೆ ಇದೇ ಮಾರ್ಗ.
— ರತ್ನಮ್ಮ ಐಸಾಕ್

— ಕಾರ್ಕ್‌ಸೆಂಬ್ಲಿ ಸದಸ್ಯರಿಗೆ ಅಗಾಧ ಗೌಂವನಿದೆ, ಮರ್ಯಾದೆ ಇದೆ : ಅನರಿಗೆ ಕಿಂಚಿತ್ತೂ ಕೊರತೆಯಾಗದು. ಅವರು ಘಟನೆಯನ್ನು ರಚಿಸುವ ಅದ್ಭುತ ಮೇಧಾವಿಗಳು ; ಸಕಲ ಸಂಯದ್ಧಿ ಸಾಲಭ್ಯಗಳೂ ಅವರಿಗೆ ಇದ್ದೇ ತೀರಬೇಕು ; ಕೈಕಾಲುಗಳಿಗೆಲ್ಲಾ ಆಳುಗಳಿರಬೇಕು. ಆದ್ದರಿಂದ ಡಬ್ಬಲ್ ಫಸ್ಟ್ ಕ್ಲಾಸೇ ಸರಿ.
— ಕೆ. ಸಿ. ರೆಡ್ಡಿ ಮತ್ತು ಎಂ. ವಿ. ಕೃಷ್ಣಪ್ಪ

— ಕಾರ್ಕ್‌ಸೆಂಬ್ಲಿಯ ಈ ಮೂರನೇ ಅಧಿವೇಶನದ ಕೊನೇದಿನ ಕಾರ್ಕ್ ಸೆಂಬ್ಲಿ ಹಾಲಿನಲ್ಲೆಲ್ಲಾ ಕತ್ತಲೆ ಕವಿಯಿತು, ಬಿರುಗಾಳಿ ಎದ್ದಿತು, ತಿಂಡಿತಟ್ಟೆಗಳೆಲ್ಲಾ ಉರುಳಿದುವು [illegible]

ಮಳೆರಾಯನಿಗುಣಿಸಲಾಯಿತು ಪ್ರೆಸ್ ಟೆಂಟು ಮುರಿದು ಬಿತ್ತು ನೈಕುಗಳೆಲ್ಲಾ ಮಂಕಾಗಿ ಬಾಯಿ ಮುಚ್ಚಿದವು.

— ಈ ಸಾರಿ ಕಾರ್ಕ್‌ಸೆಂಬ್ಲಿಯಲ್ಲಿ ಬರೀ ದೊಡ್ಡ! ಉಪನ್ಯಾಸಗಳೇ. ಒಬ್ಬರನ್ನು ಬಿಟ್ಟು ಮಿಕ್ಕವರೆಲ್ಲರೂ ಎದ್ದು ನಿಂತ ದೀಲೆ ತೋರಿ ಬಂದಹಾಗೆ ಪದಜೋಡಣೆ ಮಾಡಿ ಮಾತುಗಳನ್ನು ತಡವರಿಸಿದ್ದೂ ತಡವರಿಸಿದ್ದೇ.

— ಪ್ರಜಾಸಾಮ್ಯ ರಾಜಪ್ರಭುವಲ್ಲಿಟ್ಟು ರಾಜಾಂಗ [illegible]ಚಿಸಲು ಸಿದ್ಧಿಸಲಾಯಿತು ; ಕಾರ್ಕ್‌ಸೆಂಬ್ಲಿಯು ಬಹುತೇಕ ಹಿರಿಯ, ಕಿರಿಯ, ಪವರ್ಫಿನ ಸದಸ್ಯರೆಲ್ಲಾ ಈ ಮಹಾರಾಜರು ಕಾರ್ಕ್‌ಸ್ಟ್ಯೂನಲ್ ಹೆಡ್ ಆಗಿರಬೇಕೆಂದೇ ವಾದಿಸಿದರು. ಕೆಲವರು ಮಿತಿಮೀರಿದ ರಾಜಭಕ್ತಿ ಪ್ರದರ್ಶಿಸಿದರು, ಹಲವರು ಸರಳವಾಗಿ ನುಡಿದರು : ಕೆಲವರು ತಲೆಸವರುವ ಮಾತಾಡಿದರು

— ಆಂತೂ ರಾಜ್ಯಾಂಗಗಳನ್ನು ಈ ಮೂಲಾಧಾರಗಳ ಮೇಲೆ ನಡೆಸಬೇಕೆಂಬ ನಿರ್ಣಯವನ್ನು 5 ದಿನ ಕುಳಿತು ಪಾಸುಮಾಡಿದರು

— ಕಾರ್ಕ್‌ಸೆಂಬ್ಲಿಗಾಗಿ ಲಕ್ಷ್ಮಾಂತರ [illegible]ಟ್ಟು ಪಾಸಾ [illegible] ತನ್ನ [illegible]ದಸೆ

ಮಂತ್ರಿಮಂಡಲ ಶರಣುಬಂತು

ರಾಜ್ಯಾಂಗದ ನಾಲ್ಕನೇ ಅಂಗಕ್ಕೆ !

— ....

ಮುಂಬೈ ಎ ಐ ಸಿ ಸಿ ಅಧಿವೇಶನ ಕಾಲದಲ್ಲೂ ಮತ್ತು ನೆಹ್ರೂರ ಇತರ ಕಾರ್ಯಕ್ರಮಗಳಲ್ಲೂ ಪೋಲೀಸರೂ... ಕಾಂಗ್ರೆಸ್ಸು ಸ್ವಯಂಸೇವಕರೂ ಪತ್ರಿಕಾ ಪ್ರತಿನಿಧಿಗಳ ಮೇಲೆ ನಡೆಸಿದ ಅತ್ಯಾಚಾರಗಳಿಗಾಗಿ ಮುಂಬೈ ಪತ್ರಿಕಾ ಪ್ರತಿನಿಧಿಗಳ ಸಂಘವು ಅಲ್ಲಿ ಮಂತ್ರಿಮಂಡಲದ ಕಾರ್ಯಕ್ರಮಗಳಿಗೆಲ್ಲಾ ಬ್ಲಾಕ್‌ಔಟ್ ಮಾಡಿ ತಮ್ಮತಮ್ಮ ಪತ್ರಿಕೆಗಳಲ್ಲಿ ಪ್ರಕಟಣೆಯ ಅವಕಾಶವನ್ನು ಕೆಕಿಡಬಾರದೆಂದು ನಿರ್ಣಯಿಸಿತ್ತಷ್ಟೆ. ನುಂಬಯಿ ಮಂತ್ರಿಮಂಡಲವು ಕ್ಷಮಾಪಣೆ ಬೇಡಿದೆ

ಲ್ಲಾ ಒಪ್ಪಿಕೊಂಡರು ; ಉಪಾಧ್ಯಕ್ಷರು ತಮಗೆ ಸಂಭಾವನೆ ಬೇಡವೆಂದು ಪ್ರಕಟಗೊಳಿಸಿದ್ದು ಶ್ಲಾಘನೀಯವಾಗಿತ್ತು.

— ಜೈ ಕಾಂಸೆಂಬ್ಲಿ —

At Opera
From 14—5—48
King of Mounties
A Republic serial
in 12 thrilling Parts
ಕಿಂಗ್ ಆಫ್ ಮೌಂಟೀಸ್
ಸೀರಿಯಲ್] ಪ್ರತಿ ದಿನ 3 ಆಟಗಳು
Morning Shows from 14-5-48
THE DOLLY SISTERS
Latest

ಬೊಂಬಾಯಿ ಪತ್ರಿಕಾ ಪ್ರತಿನಿಧಿಗಳ ಮೇಲೆ ಹಲ್ಲೆ !

ಮುರಾರ್ಜಿ ದೇಸಾಯಿ ಸರ್ಕಾರದ ಸುದ್ದಿಗಳಿಗೆ ಬ್ಲಾಕ್‌ಔಟ್ ನಿರ್ಧಾರ!

ಬೊಂಬಾಯಿ ಎ ಐ ಸಿ ಸಿ ಅಧಿವೇಶನದ ಕಾಲದಲ್ಲಿ ನೆಹ್ರೂ, ರಾಜೇಂದ್ರ ಪ್ರಸಾದರವರ ದೃಕ್ಪತದಲ್ಲಿಯೇ ಮುಂಬೈ ಪೋಲೀಸರು ರಾಜ್ಯಾಂಗದ ಳ ನೇ ಅಂಗದ ಮೇಲೆ ಹಲ್ಲೆ ಮಾಡಿದರು. ನೆಹ್ರೂರವರು ವಿಮಾನ ನಿಲ್ದಾಣದಲ್ಲಿ ಇಳಿಯುವಾಗ್ಯೆ ಮಾಡಿದ ಸ್ವಾಗತ ಸಮಾರಂಭ ಕಾಲದಲ್ಲಿ ಪ್ರೆಸ್‌ಮೆನ್‌ಗಳನ್ನು ಒಳಕ್ಕೆ ಬಿಡಲೇ ಇಲ್ಲ. 'ಜನ್ಮಭೂಮಿ' ಪ್ರತಿನಿಧಿಯನ್ನು ಪೋಲೀಸರು ಹೊತ್ತುಕೊಂಡು ಹೊರಗೆ ಹಾಕಿದರು. ಕಾಂಗ್ರೆಸ್ ಸ್ವಯಂಸೇವಕರು ಇತರ ಪತ್ರಿಕಾ ಪ್ರತಿನಿಧಿಗಳನ್ನು ಹೊರಕ್ಕೆ ದಬ್ಬಿದರು.

ಮೇಯರ್‌ರವರ ಸ್ವಾಗತ ಸಂಭ್ರಮದಲ್ಲಿ ಮೇಯರ್‌ರವರಿಂದ ಆಮಂತ್ರಿಸಲ್ಪಟ್ಟಿದ್ದ ಇಂಡಿಯನ್ ಪ್ರೆಸ್ ಏಜೆನ್ಸಿ ಬ್ಯೂರೋ ಪ್ರತಿನಿಧಿ ಶ್ರೀಧರ ಕೇಳ್ಕರ್ ಮತ್ತು ರಘುವೀರ ಇವರನ್ನು ಪೋಲೀಸರು ಬೈಯುತ್ತಾ ಹೊಡೆಯುತ್ತಾ ಹೊರಗೆ ಕಳುಹಿಸಿದರು. ಇತರ ಪತ್ರಿಕಾ ಪ್ರತಿನಿಧಿಗಳಿಗೂ ಇದೆ ಪುರಸ್ಕಾರ ಸಿಕ್ಕಿತು.

ಎ ಐ ಸಿ ಸಿ ಅಧಿವೇಶನದಲ್ಲಿ ಪ್ರೆಸ್ ಪ್ರತಿನಿಧಿಗಳಿಗೆ ಫೋಟೋಗಳನ್ನು ತೆಗೆದುಕೊಳ್ಳಲು ಕೇವಲ ೨ ನಿಮಿಷಗಳನ್ನು ಕೊಡಲ್ಪಟ್ಟು, ಆ ೨ ನಿಮಿಷಗಳನಂತರ ಅಲ್ಲಿ ಇನ್ನೂ ಇದ್ದ ಕ್ಯಾಮರಾಮೆನ್‌ಗಳನ್ನು ಇವರನ್ನು ಲಾಠೀ ಚಾರ್ಜ್ ಮಾಡಿ ಪೋಲೀಸರು ಹೊರಕ್ಕೆ ದೂಡಿಬಿಟ್ಟರು. ಆ ಪೋಲೀಸ ಅತ್ಯಾಚಾರವನ್ನು ಪ್ರತಿನಿಧಿಸಿದ ಟ್ರೆಂಡ್ ಪತ್ರಿಕಾಪ್ರತಿನಿಧಿಯನ್ನು ಪೋಲೀಸರು ಅರೆಸ್ಟ್ ಮಾಡಲು ಅವರ ಹೆಂಡತಿಯು ಪೋಲೀಸು ಕಮಿಷನ್ನರ ಹತ್ತಿರ ಮೊರೆ ಇಟ್ಟು ಅವರನ್ನು ಬಿಡಿಸಿಕೊಂಡು ಹೋದರು. ಪೋಲೀಸರ ಅತ್ಯಾಚಾರವನ್ನು ನೋಡಿ ಅಧಿವೇಶನದಲ್ಲಿದ್ದ ಇತರ ಪತ್ರಿಕಾ ಪ್ರತಿನಿಧಿಗಳು ಅಧಿವೇಶನವನ್ನು ಬಹಿಷ್ಕರಿಸಿ ಹೊರಕ್ಕೆ ಬಂದರು.

ತ್ರಿಕುಂದಾಸ್ ಇವರು ತಮ್ಮ ಚಲನಚಿತ್ರವನ್ನು ಪ್ರಾರಂಭಿಸಲು ನೆಹ್ರೂರವರನ್ನು ಕೋರಿದ್ದರು. ಅವರು ಈ ಸಮಾರಂಭಕ್ಕೆ ಬಂದಾಗ್ಯೆ ಅಲ್ಲಿಯೂ ಪೋಲೀಸರ ಅತ್ಯಾಚಾರದಿಂದ ಘಾಯಪಟ್ಟ ಪತ್ರಿಕಾ ಪ್ರತಿನಿಧಿಗಳನ್ನೇ ಆ ಆ ಸ್ಪತ್ರೆಯಲ್ಲಿ ಮೊದಲನೇ ರೋಗಿಗಳಾಗಿ ಉಪಚರಿಸಲ್ಪಟ್ಟರು !

ಗೌರ್ನರರು ನೆಹ್ರೂರವರಿಗೆ ಸ್ವಾಗತ ಸಂಭ್ರಮವನ್ನು ಏರ್ಪಡಿಸಿದ್ದರು. ಅದಕ್ಕೆ ಗವರ್ನರರ ಸಹಿಯಿಂದ ಆಮಂತ್ರಣ ಪತ್ರಿಕೆಗಳು ಪತ್ರಿಕಾ ಪ್ರತಿನಿಧಿಗಳಿಗೆ ಕಳಿಸಲ್ಪಟ್ಟಿದ್ದವು. ಆದರೆ ಆ ಆಮಂತ್ರಣ ಪತ್ರಿಕೆಗಳಿಗೆ ಮನ್ನಣೆಯು ಕೂಡ ಸಿಗಲಿಲ್ಲ. ಆ ಆಮಂತ್ರಣ ಪತ್ರಿಕೆಗಳಿದ್ದ ಪತ್ರಿಕಾ ಪ್ರತಿನಿಧಿಗಳಿಗೂ ಗವರ್ನರು ಭವನದಲ್ಲಿ ಪ್ರವೇಶ ಸಿಗಲಿಲ್ಲ [ನ ಸಂ.

Mysore City Municipality

((Works Department)

Notification

Sealed tenders will be received up to 4 p. m. on 18–5–48 by the Municipal Engineer for the construction of a Maternity Hospital at Nazarbad, Mysore.

Each tender must be accompanied with a Chellan for having remitted Rs. 3000 to the Municipal Treasury as earnest money. Sealed covers should be superscribed as ' Tender for the construction of a Maternity Hospital at Nazarbad Mohalla, Mysore'. Cheques in any case will not be accepted.

For full particulars please see the Notification on the Office Notice Board.

S. Narayanaswamy
Municipal Engineer
Mysore

ಪ್ರಭಾದಲ್ಲಿ — ಹಂ ಏಕ್ ಹೈ

Save the Cow
ಗೋ ವಧೆ ನಿಲ್ಲಲಿ

Good Printing
L. M

ಗ್ರೈಪ್ ಸಿರಪ್

ಟ್ರೇಡ್ ITL ಮಾರ್ಕ್

ಎಳೆಯ ಮಕ್ಕಳ ಜೀರ್ಣಶಕ್ತಿಯನ್ನು ಬಲಪಡಿಸುವ ಷರಬತ್ತು. ಗ್ರೈಪ್ ಸಿರಪ್ ರುಚಿ ಸಹಿಯಾಗಿಯೂ ಮತ್ತು ಆಹ್ಲಾದ ಉಂಟುಮಾಡುವುದಾಗಿಯೂ ಇರುವುದರಿಂದ ಮಕ್ಕಳ ಸೇವನೆಗೆ ಅನುಕೂಲವಾದುದು.

ಪ್ರತಿಯೊಬ್ಬ ತಾಯಿಯೂ ಮನೆಯಲ್ಲಿ ಈ ಷರಬತ್ತಿನ ಸೀಸೆ ಒಂದನ್ನು ಯಾವಾಗಲೂ ಕೈಗಾವಲಾಗಿಟ್ಟಿರುವುದು ಅತ್ಯವಶ್ಯಕ.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd.
Malleswaram P. O. Bangalore

ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇಸರಿ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಾದುದು. ಸ್ಪೇನಿನ ಕೇಸರಿ ಗಿಡಗಳಲ್ಲಿಯ ಹೂಗಳಿಂದ ಆರಿಸಿ ತೆಗೆದುದಾಗಿದೆ. ನಮ್ಮಿಂದ ಸ್ಪೆಷಲ್ಲಾಗಿ ಆಮದು ಮಾಡಲ್ಪಟ್ಟಿರತಕ್ಕದ್ದು. ಬಹು ಹೊಳಪಿನಿಂದಲೂ ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಆಕ್ಷೇಪಣೀಯ ಪದಾರ್ಥಗಳೂ ಸೇರಿಲ್ಲ, ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ್ಥಾನಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥಗಳಿಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸುಮಾಡಲಾಗಿದೆ, ½ ತೋಲಾ, ೧ ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಯಾಗಿಯೂ ದೊರೆಯುತ್ತದೆ. ಉಪಯೋಗಿಸಬೇಕಾಗಿ ವಿನಂತಿ

ವಲ್ಲಭದಾಸ್ ತೇಜ್‌ಪಾಲ್
೧೪ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸ್.

SHAKTI
[illegible]DHA

ನ್ನು ಮಾಡಿದರು. ಶ್ರೀ ತಟ್ಟುವಟ್ಟು ವಾಸುದೇವಭಟ್ಟರೂ ಶ್ರೀನಿವಾಸ ಶೆಡ ಲಾಯರೂ ಮೊದಲಾದವರು ಭಾಷಣ ದಲ್ಲಿ ಭಾಗವಹಿಸಿದ್ದರು. ತರುವಾಯ ವೇದತ್ರಯ ಭಾಷ್ಯಾದಿ ಗ್ರಂಥಗಳ ಪಾರಾಯಣ ನಡೆದು ಮಹಾಪೂಜೆ ಸಂತರ್ಪಣೆಗಳು ನಡೆದವು. ಮಧ್ಯಾಹ್ನ ಮಂಗಲಾಚರಣೆಯೂ, ಪಂಡಿತರಾಜ ಪಂಡಿತಪ್ರವರ ಶ್ರೀ ನವೀನಂ ವೆಂಕಟೇಶ ಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಜಗದ್ಗುರು ಪೀಠಗಳಿಂದಲೂ ಕೂಡ ಬಂದ ಸಂದೇಶಗಳನ್ನು ಓದಿದನಂತರ, ಕಾರ್ಯದರ್ಶಿಗಳಿಂದ ಗತವರ್ಷದ ವಂದಿ ವಾಜನವಾದ ಮೇಲೆ ಶ್ರೀ ಮಂಗೇರಿ ಪದ್ಮನಾಭ ಅಡಿಗಳು ವಿಕಾಸ ವಾದದ ವಿಷಯ ಕುರಿತೂ ಸಭೆಯ ಮಹತ್ವದ ಕುರಿತೂ ಶ್ರೀ ಶ್ರೀನಿವಾಸ ಉಪಾಧ್ಯಾಯ ವೇದಾಂತಶಿರೋಮಣಿ ಇವರೂ ಕರ್ಮಯೋಗದ ಕುರಿತು ವೇದಾಂತವಿದ್ವಾನ್ ವೆಂಕಟ್ರಮಣ ಶಾಸ್ತ್ರಿಗಳೂ, ಭಕ್ತಿಯೋಗದಲ್ಲಿ ಪಂಡಿತ ಪ್ರವರ ರಾಮಚಂದ್ರ ಸೋಮಯಾಜಿಗಳೂ, ಜ್ಞಾನಯೋಗದಲ್ಲಿ ಶ್ರೀಮಾನ್ ಅಧ್ಯಕ್ಷರೂ ಭಾಷಣ ಮಾಡಿದ ಮೇಲೆ ಆಸ್ಥಾನವಿದ್ವಾನ್ ಕೊಡೂರು ಶಾನುಭಟ್ಟರು ಶೃಂಗೇರಿ ಇವರು ಸಭೆಯನ್ನು ಜರುಗಿಸಿ ಸರ್ವರಿಗೂ ಜ್ಞಾನಪ್ರಸರಣವಾಗುವಂತೆ ಮಾಡಿದ ಶ್ರೀಶ್ರೀಗಳವರನ್ನೂ, ಇದರ ಚಾಲಕ ಮಂಡಲಿಯವರನ್ನೂ ಪ್ರಶಂಸಿಸಿ, ದೂರದೂರಗಳಿಂದ ಬಂದವರಿಗೂ ಸಂತೋಷವನ್ನು ಪ್ರದರ್ಶಿಸಿದರು. ತರುವಾಯ ವಿದ್ಯಾರ್ಥಿಗಳಿಗೂ, ಇತರ ವಿದ್ವಾಂಸರಿಗೂ ಸಂಭಾವನಾ ವಿತರಣೆಯಾಗಿ ಧನ್ಯವಾದಗಳನ್ನು ಸಮರ್ಪಿಸಿದೊಡನೆ ಸಭಾಕಾರ್ಯವಾಯಿತು. ಶ್ರೀಮಠ ಹರಿಹರಪುರದ ಶ್ರೀಶ್ರೀಗಳವರು ತಮ್ಮ ಅಮೂಲ್ಯ ಸಮಯವನ್ನು ಸಭೆಗಾಗಿ ವ್ಯಯಿಸಿ ಸರ್ವ ವಿಧದಿಂದಲೂ ಸಹಾಯಮಾಡಿ ಕಾರ್ಯವನ್ನು ಸಾಂಗಗೊಳಿಸಿದುದು ಸ್ತುತ್ಯವಾಗಿದೆ.

೧೬ ನೆಯ ನಿಖಿಲ ಕರ್ಣಾಟಕ ಆಯುರ್ವೇದ ಸಮ್ಮೇಳನ

ಇದೇ ತಿಂಗಳು ೩೦ ಮತ್ತು ೩೧ ನೆ ದಿನ ೧೬ ನೇ ನಿ. ಕ. ಆ. ಸಮ್ಮೇಲನವೂ, ಸಿದ್ಧೌಷಧಿ, ಮೂಲಿಕಾ. ಉಪಕರಣಾದಿಗಳ ಪ್ರದರ್ಶನವೂ ಬೆಳಗಾಂವಿಯಲ್ಲಿ ನಡೆಯುವುದು. ಸ್ಟಾಲುಗಳಿಗೆಲ್ಲಾ ವಿದ್ಯುದ್ದೀಪದ ವ್ಯವಸ್ಥೆ ಮಾಡಲಾಗಿದೆ. ಜನಗಳ ಮುಖ್ಯ ವಿಹಾರ ಸ್ಥಳದಲ್ಲಿಯೇ 'ಲಲಿತಕಲಾ ಪ್ರದರ್ಶನ ಶಿಶುಸಂಗೋಪನವಾರ' ಮತ್ತು ಆಯುರ್ವೇದ್ಯ ಸಮ್ಮೇಲನವೂ ಪ್ರದರ್ಶನವೂ ನಡೆಯುವುದರಿಂದ ನೇ ೨೪ ರಿಂದ ಜೂ ೧ ನೆಯ ದಿನದವರೆಗೆ ಪ್ರದರ್ಶನಕ್ಕೆ ಅವಕಾಶಕೊಡಲಾಗಿದೆ. ಎಲ್ಲವನ್ನೂ ಬಹು ಯಶಸ್ವಿಯಾಗಿ ನಡೆಸಲು ಸಾಗತ ಸಮಿತಿಯವರು ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ — ಎಂದು ಕಾರ್ಯದರ್ಶಿ ಶ್ರೀ ಕೆ. ಪಿ. ಪುರಾಣಿಕರು ತಿಳಿಸುತ್ತಾರೆ.

At Opera

From 14–5–48

King of Mounties

ಕಿಂಗ್ ಆಫ್ ಮೌಂಟೀಸ್

ಸೀರಿಯಲ್

Morning Shows from 21-5-48

ಬಿಂದಿಯ (ಹಿಂದಿ)

Save the Cow

ಗೋ ವಧೆ ನಿಲ್ಲಲಿ

Edited, Printed and Published by M S Krishna Rao at the Satyavadi Press, Chamaraj Agrahar, Mysore

ಬ್ರಿಟಿಷ್ ರೇಡಿಯೋ ಕೈಗಾರಿಕೆ

ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇಸರಿ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಾದುದು. ಸ್ಪೇನಿನ ಕೇಸರಿ ಗಿಡಗಳಲ್ಲಿಯ ಹೂಗಳಿಂದ ಆರಿಸಿ ತೆಗೆದುದಾಗಿದೆ. ನಮ್ಮಿಂದ ಸ್ಪೆಷಲ್ಲಾಗಿ ಅಮದು ಮಾಡಲ್ಪಟ್ಟಿರತಕ್ಕದ್ದು. ಬಹು ಹೊಳಪಿನಿಂದಲೂ ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಆಕ್ಷೇಪಣೀಯ ಪದಾರ್ಥಗಳೂ ಸೇರಿಲ್ಲ, ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ್ಥಾನಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥಗಳಿಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸುಮಾಡಲಾಗಿದೆ. ½ ತೋಲಾ, 1 ತೋಲಾ, ಡಬ್ಬಿಗಳಲ್ಲಿಯೂ, ಟಿಲ್ಲರೆಯಾಗಿಯೂ ದೊರೆಯುತ್ತದೆ. ಉಪಯೋಗಿಸಬೇಕಾಗಿ ವಿನಂತಿ

ವಲ್ಲಭದಾಸ್ ತೇಜ್ ಪಾಲ್

ನಾಯಕ್ ರಸ್ತೆ, ಜಿ. ಟಿ. ಮದರಾಸ್.

ಕಿಸ್ಮತ್ ಹಮಾರ ಸಾತ್ ಹೈ ಜಲನೆ ವಾಲೆ ಜಲಾಕರೆ

ಪ್ರಭಾ

21–5–48 ರಿಂದ — ದಿನವಹಿ 3 ಆಟಗಳು

ಖಿಡ್ಕಿ (ಹಿಂದಿ)

ಪಾತ್ರ: ರೆಹನಾ, ಮವ್ವಾಜ್ ಆಲಿ,